# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 979 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.12.2024 |
| ಉತ್ತರಿಸುವವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗಣಿಗಾರಿಕೆ ಪ್ರದೇಶಗಳ ಸಮೀಪದಲ್ಲಿ ಸ್ಥಾಪಿತವಾಗಿರುವ ನಾಗರೀಕ ಸಮುದಾಯಗಳ ಮೇಲೆ ಆರ್ಥಿಕವಾಗಿ ಬೀರುತ್ತಿರುವ ಪರಿಣಾಮಗಳೇನು: (ಮಾಹಿತಿ ನೀಡುವುದು) | ಗಣಿಗಾರಿಕೆಯಿಂದ ಸುತ್ತಮುತ್ತಲಿನ ಪ್ರದೇಶದ ಮೇಲೆ ಯಾವುದೇ ವ್ಯತಿರಿಕ್ತ ಆರ್ಥಿಕ ಪರಿಣಾಮ ಬೀರಿರುವುದು ವರದಿಯಾಗಿರುವುದಿಲ್ಲ. |
| ಆ) | ಈ ವಲಯವು ಸುಧಾರಿತ ತಂತ್ರಜ್ಞಾನದ ಮೂಲಕ ಮೂಲಸೌಕರ್ಯಗಳ ನಾವೀನ್ಯತೆ ಮತ್ತು ಅಭಿವೃದ್ಧಿಯ ಮೂಲಕ ನಾಗರೀಕ ಅವಕಾಶಗಳನ್ನು ಸೃಷ್ಟಿಸುತ್ತದೆಯೇ: | ಗಣಿಗಾರಿಕೆಯಿಂದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಗಣಿಗಾರಿಕೆಯಿಂದ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ಸಂಗ್ರಹವಾಗುವ ವಂತಿಕೆಯಿಂದ ಗಣಿ ಭಾದಿತ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮವಹಿಸಲಾಗುತ್ತಿದೆ ಹಾಗೂ ಇದರಿಂದಲೂ ಪರೋಕ್ಷವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿರುತ್ತವೆ. |
| ಇ) | ಗಣಿಗಾರಿಕೆಯ ಮೂಲಕ ಖನಿಜ ಸಂಪನ್ಮೂಲಗಳ ಬಳಕೆಯನ್ನು ಹೆಚ್ಚಿಸಲು ಆಡಳಿತ ಕಾರ್ಯ ವಿಧಾನಗಳನ್ನು ಸರಳಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ: | ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ ಕಾಯ್ದೆ ಮತ್ತು ನಿಯಮಗಳನ್ನು ರೂಪಿಸುವ ಅಧಿಕಾರ ಭಾರತ ಸರ್ಕಾರಕ್ಕಿದ್ದು ಅದರಂತೆ ಗಣಿಗಾರಿಕೆ ಮತ್ತು ಖನಿಜಾನ್ವೇಷಣೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಶ್ಯಕ ಕಾರ್ಯವಿಧಾನಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಮೂಲಕ ಕಾರ್ಯಗಳನ್ನು ಸರಳೀಕೃತಗೊಳಿಸಿದೆ. ಉಪಖನಿಜಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನಿಯಮಗಳನ್ನು ರೂಪಿಸುವ ಅಧಿಕಾರವಿದ್ದು, ಅದರಂತೆ ಗಣಿಗಾರಿಕೆ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಶ್ಯಕ ಕಾರ್ಯವಿಧಾನಗಳನ್ನು ರೂಪಿಸಿಕೊಂಡು ಸರಳೀಕೃತಗೊಳಿಸಿದೆ. |
| ಈ) | ಅಪಘಾತಗಳಿಗೆ ಕಾರಣವಾಗಬಹುದಾದ ಅನಧಿಕೃತ ಅಥವಾ ಅವೈಜ್ಞಾನಿಕ ಗಣಿಗಾರಿಕೆಯನ್ನು ತಡೆಗಟ್ಟಲು ಗಣಿಗಾರಿಕೆ ಸಂಬಂಧಿತ ನಿಯಮಗಳ ಅನುಷ್ಠಾನದಲ್ಲಿ ಕೈಗೊಂಡ ಕ್ರಮಗಳೇನು: | ಮುಖ್ಯ ಖನಿಜಗಳಿಗೆ ಸಂಬಂಧಿಸಿದಂತೆ ಗಣಿಗುತ್ತಿಗೆದಾರರು Indian Bureau of Mines ರವರು ಅನುಮೋದಿಸಿದ ಮೈನಿಂಗ್ ಪ್ಲಾನ್ ಹಾಗೂ ಉಪಖನಿಜಗಳಿಗೆ ಸಂಬಂಧಿಸಿದಂತೆ ಕ್ವಾರಿ ಪ್ಲಾನ್ ರನ್ವಯ ಗಣಿಗಾರಿಕೆಯನ್ನು ನಡೆಸುತ್ತಿದ್ದು, ಅನಧಿಕೃತ ಅಥವಾ ಅವೈಜ್ಞಾನಿಕ ಗಣಿಗಾರಿಕೆ ಕಂಡಲ್ಲಿ ಸಕ್ಷಮ ಪ್ರಾಧಿಕಾರಿಗಳು ಗಣಿಗುತ್ತಿಗೆಗಳನ್ನು ಸ್ಥಗಿತಗೊಳಿಸಿ ಆದೇಶ ಹೊರಡಿಸುತ್ತವೆ. |

| | | |
|---|---|---|
| ಉ) | ಗಣಿಗಾರಿಕೆ ಕ್ಷೇತ್ರದ ಬೆಳವಣಿಗೆಯ ಸಾಮರ್ಥ್ಯವನ್ನು ಸುಧಾರಿಸಲು ರಚನಾತ್ಮಕ ಬದಲಾವಣೆಗಳು, ಆಡಳಿತ ನೀತಿಗಳು ಮತ್ತು ಜಾಗತಿಕ ಗುಣಮಟ್ಟದ ತಾಂತ್ರಿಕ ಪ್ರಗತಿಗಳನ್ನು ಅಳವಡಿಸಿಕೊಳ್ಳಲು ಇಲಾಖೆಯು ಉದ್ದೇಶಿಸಿದೆಯೇ ? | ಗಣಿ ಸುರಕ್ಷತೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಗಣಿ ಸುರಕ್ಷತಾ ಇಲಾಖೆಯು (Director General of Mines Safety) ಮೇಲ್ವಿಚಾರಣೆ ನಡೆಸಿ, ಗಣಿಗಳ ಸುರಕ್ಷತೆಗೆ ಸೂಕ್ತ ನಿರ್ದೇಶನ ನೀಡುತ್ತದೆ ಹಾಗೂ ಅಗತ್ಯಬಿದ್ದಲ್ಲಿ ಗಣಿಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸುತ್ತದೆ.<br><br>ಅಪಘಾತಗಳಿಗೆ ಕಾರಣವಾಗಬಹುದಾದಂತಹ ಪ್ರಕರಣಗಳಲ್ಲಿ ಸದರಿ ಸಂಸ್ಥೆಯು ಗಣಿಗುತ್ತಿಗೆದಾರರಿಗೆ ಮುಂಜಾಗ್ರತ ಕ್ರಮ ವಹಿಸಲು ಸೂಚಿಸುತ್ತದೆ. ಅಲ್ಲದೇ, Director General of Mines Safety (DGMS) ವತಿಯಿಂದಲೂ ಸಹ ಮೇಲ್ವಿಚಾರಣೆ ನಡೆಸಿ ಸೂಕ್ತ ಕ್ರಮಕ್ಕೆಗೊಳ್ಳುವಂತೆ ಗಣಿಗುತ್ತಿಗೆದಾರರಿಗೆ ಸೂಚಿಸುತ್ತದೆ.<br>ಗಣಿಗಾರಿಕೆ ಕ್ಷೇತ್ರದ ಬೆಳವಣಿಗೆಯ ಸಾಮರ್ಥ್ಯವನ್ನು ಸುಧಾರಿಸಲು ಆಡಳಿತ ನೀತಿಗಳು ಮತ್ತು ಜಾಗತಿಕ ಗುಣಮಟ್ಟದ ತಾಂತ್ರಿಕ ಪ್ರಗತಿಗಳನ್ನು ಇಲಾಖೆ ಈಗಾಗಲೇ ಕೈಗೊಂಡು ವೈಜ್ಞಾನಿಕ ಗಣಿ ಚಟುವಟಿಕೆಗಳಿಗೆ ಮಾತ್ರ ಪ್ರೋತ್ಸಹಿಸುತ್ತಿದೆ. ಗಣಿಗುತ್ತಿಗೆದಾರರು ಜಾಗತಿಕ ಗುಣಮಟ್ಟದ ತಂತ್ರಜ್ಞಾನ ಬಳಸಿಕೊಂಡು ವ್ಯವಸ್ಥಿತ ಮತ್ತು ವೈಜ್ಞಾನಿಕ ಗಣಿಗಾರಿಕೆ ನಿರ್ವಹಿಸುತ್ತಿರುತ್ತಾರೆ.<br><br>Integrated Lease Management System (ILMS) ಅನುಷ್ಠಾನಗೊಳಿಸುವ ಮೂಲಕ ಖನಿಜಾಡಳಿತವನ್ನು ಇ-ಆಡಳಿತ ವ್ಯಾಪ್ತಿಗೆ ತರಲಾಗಿದೆ. ಗಣಿ ಪ್ರದೇಶದಿಂದ ಉಂಟಾಗುವ ಹಾನಿಗಳನ್ನು ತಡೆಗಟ್ಟಲು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೂಲಕ ವಂತಿಗೆ ಸಂಗ್ರಹಿಸಿ ಗಣಿಬಾಧಿತ ಪ್ರದೇಶದ ಪುನಃಶ್ಚೇತನ ಮತ್ತು ಜನರ ಜೀವನ ಮಟ್ಟವನ್ನು ಸುಧಾರಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಸಿಐ 236 ಎಂಎಂಎಂ 2024**

**(ಎಸ್.ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂವಿಜ್ಞಾನ ಹಾಗೂ**
**ತೋಟಗಾರಿಕೆ ಸಚಿವರು**